ಸಿ.ಸಿ.389/2022 ಪಿಡಬ್ಲ್ಯೂ-5

ದಿನಾಂಕಃ 05.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ**

ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ-5 ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ಪೋಲಿಸರು ನನಗೆ ಓದಿ ಹೇಳಿದ್ದರು. ಆ ರೀತಿ ಚಾಸಾ-24 PSI ರವಿರವರು ಓದಿ ಹೇಳಿದ್ದರು. ನಾನು ಸಹಿ ಮಾಡಿದ ದಾಖಲೆ ಟೈಪ್ ಮಾಡಿದ ದಾಖಲೆಯಾಗಿತ್ತು. ಸದರಿ ದಾಖಲೆ 4-5 ಪುಟಗಳಲ್ಲಿ ಇತ್ತು. ನಿಪಿ-5 ಕ್ಕೆ ನಾನು ಮತ್ತು ಚಾಸಾ-10 ರವರು ಸಹಿ ಮಾಡಿದ್ದೇವೆ. ನಾನು ಈ ದಿನ ಚಾಸಾ-2 ರವರ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ರವರು ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿಯಲ್ಲ. ದಿ.06.12.2021 ರಂದು ಪೋಲಿಸರು ನಿಪಿ-5 ಕ್ಕೆ ನನ್ನ ಸಹಿ ಪಡೆದಿದ್ದಾರೆ. ಆ ದಿನ ನನ್ನ ಸಮಕ್ಷಮ ವಶಕ್ಕೆ ಪಡೆದುಕೊಂಡರು ಎಂದು ಹೇಳಲಾದ ವಸ್ತುವಿನ ಮೇಲೆ ಕೀಟನಾಶಕ ಎಂದು ಬರೆದಿತ್ತು. ಸದರಿ ಪ್ಯಾಕೇಟ್ ನಲ್ಲಿ ಸುಮಾರು 50 ಗ್ರಾಂ.ನಷ್ಟು ಕೀಟನಾಶಕ ಇತ್ತು. ಆ ವಸ್ತುವನ್ನು ಪೋಲಿಸರಿಗೆ ಕೊಟ್ಟ ಮಹಿಳೆಯ ಹೆಸರು ಈಗ ನನಗೆ ಮರೆತುಹೋಗಿದೆ.

ನಾನು ಠಾಣೆಗೆ ಹೋಗುವ ಮುನ್ನವೇ ಕೀಟನಾಶಕವನ್ನು ತಂದುಕೊಟ್ಟಿದ್ದರು. ಸದರಿ ವಸ್ತುವನ್ನು ಪೋಲಿಸರು ನನ್ನ ಸಮಕ್ಷಮ ತೂಕ ಮಾಡಿಲ್ಲ. ಸದರಿ ಪ್ಯಾಕೇಟ್ ನಲ್ಲಿ 50 ಗ್ರಾಂ.ನಷ್ಟು ಕೀಟನಾಶಕ ಇದೆ ಎಂದು ಅದನ್ನು ಪೋಲಿಸರಿಗೆ ಕೊಟ್ಟ ಮಹಿಳೆಯೇ ಹೇಳಿದರು. ಕೀಟನಾಶಕ ಇದ್ದ ಪ್ಯಾಕೇಟ್ ಕಪ್ಪು ಬಣ್ಣದ ಕವರ್ ನಲ್ಲಿ ಇತ್ತು. ಆ ದಿನ ಪೋಲಿಸರು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನ ಪೋಟೋ ತೆಗೆದಿದ್ದಾರೆ. ಪೋಟೋವನ್ನು PSI ರವಿರವರೇ ತೆಗೆದಿದ್ದಾರೆ. ಪೋಟೋಗೆ ನಾನು, ಸದರಿ ಮಹಿಳೆ, PSI ರವಿ ಮತ್ತು ಚಾಸಾ-10 ರವರು ನಿಂತಿದ್ದೇವೆ. ನಾನು ಹೇಳಿದ ದಿನಾಂಕದಂದು ಪೋಲಿಸರು ನನ್ನನ್ನು ಕರೆದಾಗ ಬೆ.11.05 ರ ಸಮಯವಾಗಿತ್ತು. ನಾನು ಆಟೋ ಚಾಲಕ ವೃತ್ತಿ ಮಾಡುತ್ತೇನೆ. ಆ ದಿನಾಂಕದಂದು ನಾನು ಬಾಡಿಗೆ ಮುಗಿಸಿ ಬರುವಾಗ ಪೋಲಿಸರು ನನ್ನನ್ನು ಕರೆದರು. ಆ ದಿನ ಚಾಸಾ-10 ರವರು ನನ್ನ ಆಟೋದಲ್ಲಿ ಇರಲಿಲ್ಲ. ಆದರೆ ಅವರು ಪೋಲಿಸ್ ಠಾಣೆಯ ಹೊರಗಡೆ ನಿಂತಿದ್ದರು. ನಾನು ಆಟೋದಲ್ಲಿ ಇರುವಾಗಲೇ ಪೋಲಿಸರು ನನಗೆ ನೋಟೀಸು ಕೊಟ್ಟಿದ್ದರು. ನೋಟೀಸ್ ನಲ್ಲಿ ಏನು ಬರೆದಿತ್ತು ಎಂದು ನನಗೆ ಮಾಹಿತಿ ಇಲ್ಲ.

ನಾನು ಹೇಳಿರುವ ದಿನಾಂಕದಂದು 2-3 ಸಹಿಗಳನ್ನು ಮಾಡಿದ್ದೇನೆ. ವಶಕ್ಕೆ ಪಡೆಯಲಾಗಿದೆ ಎಂದು ಹೇಳಲಾದ ವಸ್ತುವಿನ ಮೇಲೆ ಏನನ್ನು ಅಂಟಿಸಿ ಸೀಲು ಮಾಡಿರಲಿಲ್ಲ. ಮಹಜರ್ ನ್ನು ಟೈಪ್ ಮಾಡಿದ್ದವರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಕಿತ್ತಲೆಗಂಡಿಯ ವಾಸಿ ಎಂದರೆ ಸರಿ. ಚಾಸಾ-2 ರವರು ಸಹಾ ನಮ್ಮ ಊರಿನ ವಾಸಿ ಎಂದರೆ ಸರಿ. ನಾನು ಚಾಸಾ-2 ರವರು ಕರೆದಾಗ ಆಟೋ ಬಾಡಿಗೆಗೆ ಹೋಗುತ್ತೇನೆ ಎಂದರೆ ಸರಿ. ಈ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಸಿ.ಸಿ.389/2022 ಪಿಡಬ್ಲ್ಯೂ-5

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾಧಂ.,
ಮೂಡಿಗೆರೆ.